ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಸಾಮಾನ್ಯ ಸಭೆ-3/360/2019-20 ದಿನಾಂಕ: 29.08.2019.

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 23.08.2019 ರಂದು ಜರುಗಿದ 3ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: **23.08..2019** ರಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ 3ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
29/8/19

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಸಾಮಾನ್ಯ ಸಭೆ–3/360/2019–20 **ದಿನಾಂಕ: 29.08.2019.**

ದಿನಾಂಕ 23.08.2019 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 3 ನೇ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜಾಫೆಟ್,<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ಎನ್. ನರಸಿಂಹಮೂರ್ತಿ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್, | ಸದಸ್ಯರು |
| 5. | ಡಾ: ಶಾಂತಿ ರಾಜೇಂದ್ರ ಕುಮಾರ್, | ಸದಸ್ಯರು |
| 6. | ಡಾ: ಎಸ್. ಹರೀಶ್, | ಸದಸ್ಯರು |
| 7. | ಡಾ: ಆಶಾ ಗಣೇಶ್, | ಸದಸ್ಯರು |
| 8. | ಪ್ರೊ: ಎನ್. ಚಂದ್ರಪ್ಪ,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯ<br>ಕಾರ್ಯದರ್ಶಿಗಳು |

ಪ್ರೊ: ವಿ. ಶಿವರಾಂ, ಕುಲಸಚಿವರು, ರಜೆಯ ಮೇಲಿರುವುದರಿಂದ ಪ್ರಭಾರ ಕುಲಸಚಿವರಾದ ಪ್ರೊ: ಎನ್. ಚಂದ್ರಪ್ಪ, ಕುಲಸಚಿವರು (ಮೌಲ್ಯಮಾಪನ) ರವರು ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರಿಗೆ ಆತ್ಮೀಯವಾದ ಸ್ವಾಗತವನ್ನು ಕೋರಿದರು. ಅನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

29/8/19

**ವಿಷಯ ಸಂಖ್ಯೆ–1:** ದಿನಾಂಕ 19.07.2019 ರಂದು ಜರುಗಿದ ಸಿಂಡಿಕೇಟ್ 2ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸುವ ಕುರಿತು.

1) ಮಾನ್ಯ ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರು, ನಡಾವಳಿಯ ವಿಷಯ ಸಂಖ್ಯೆ 8 ಮತ್ತು 10 ಕುರಿತಂತೆ ತಮ್ಮ ಹೇಳಿಕೆಗಳನ್ನು ನಡಾವಳಿಯಲ್ಲಿ ನಮೂದಿಸಿದೇ ಇರುವುದನ್ನು ಕುಲಪತಿಗಳ ಗಮನಕ್ಕೆ ತಂದರು.

ಕುಲಪತಿಗಳು ವಿವರಣೆ ನೀಡುತ್ತಾ ವಿಷಯ ಸಂಖ್ಯೆ 8 ರಲ್ಲಿ CBSMS ಪ್ರವೇಶಗಳ ಕುರಿತು ಪೋಲೀಸ್ ಠಾಣೆಗೆ ದೂರು ದಾಖಲಿಸುವ ಪ್ರಸ್ತಾಪವಿದ್ದು ಮುಂದೆ ಇದು ನ್ಯಾಯಾಲಯದಲ್ಲಿ ದಾಖಲೆಯಾಗಿ ಪರಿಗಣಿಸುವುದರಿಂದ ಅನಗತ್ಯವಾದ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಸದಸ್ಯರ ಹೆಸರು ಹಾಗೂ ಅವರ ಅಭಿಪ್ರಾಯವನ್ನು ದಾಖಲಿಸಿರುವುದಿಲ್ಲ ಎಂದು ತಿಳಿಸಿದರು. ಮುಂದುವರೆದು, ಕಳೆದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿದಂತೆ, ಪ್ರಮುಖ ವಿಷಯಗಳ ಕುರಿತು ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರ ಹೆಸರುಗಳನ್ನು ದಾಖಲಿಸಲಾಗುತ್ತದೆ ಎಂದು ತಿಳಿಸಿದರು.

ವಿಷಯ ಸಂಖ್ಯೆ 10 ಕುರಿತಂತೆ "ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ಹಾಗೂ ಡಾ: ಹೆಚ್.ಟಿ. ಅರವಿಂದ್ ಅವರು ಸರ್ಕಾರಿ ಆರ್.ಸಿ. ಕಾಲೇಜಿನ ವಿದ್ಯಾರ್ಥಿಗಳಿಗೆ ನೀಡಲಾದ ಅಂತರಿಕ ಅಂಕಗಳ ಕುರಿತು ಪ್ರಸ್ತಾಪಿಸಿದರು" ಎಂದು ಸೇರಿಸಿ ಧೃಢೀಕರಿಸಲಾಯಿತು.

2) ಮಾನ್ಯ ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿ ಅವರು House Keeping ಹಾಗೂ ಉದ್ಯಾನ ಕೆಲಸಗಾರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನೀಡುವ ಕುರಿತು ಕೈಕೊಂಡ ಕ್ರಮದ ವಿವರಗಳನ್ನು ತಿಳಿಯ ಬಯಸಿದರು.

ಕಿಯೋನಿಕ್ಸ್ ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆ ಪಡೆದಲ್ಲಿ ತೆರಿಗೆ, ಸೇವಾ ತೆರಿಗೆ, ಸೇವಾ ದರ ಇತ್ಯಾದಿ ಹೆಚ್ಚಿನ ಮೊತ್ತ ಪಾವತಿಸಬೇಕಾಗುತ್ತದೆ. ಸರ್ಕಾರದಿಂದ ಸಿಬ್ಬಂದಿಗಳ ವೇತನಕ್ಕಾಗಿ ಯಾವುದೇ ರೀತಿಯ ಅನುದಾನ ಇದುವರೆಗೆ ವಿಶ್ವವಿದ್ಯಾಲಯಕ್ಕೆ ಬಂದಿರುವುದಿಲ್ಲ ಹಾಗಾಗಿ ವಿಶ್ವವಿದ್ಯಾಲಯದ ಅಂತರಿಕ ಸಂಪನ್ಮೂಲಗಳಿಂದ ವೇತನ ಪಾವತಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ಈ ಕುರಿತು ಪರಿಶೀಲಿಸಿ ವರದಿ ನೀಡಲು ಕಳೆದ ಸಿಂಡಿಕೇಟ್ ಸಭೆಯಲ್ಲಿ ಒಂದು ಸಮಿತಿ ರಚಿಸಲಾಗಿದೆ. ಅದರ ವರದಿ ಬಂದ ನಂತರ ಅಗತ್ಯ ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದರು. House Keeping ಹಾಗೂ

ಉದ್ಯಾನ ಕೆಲಸಗಾರರ ಸೇವೆ ಪಡೆಯಲು Tender ಕರೆಯಲು ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದರು.

3) 70 ವರ್ಷ ವಯಸ್ಸು ಪೂರೈಸಿರುವ ಸಂಚಿತ ವೇತನದ ನಿವೃತ್ತ ಸಿಬ್ಬಂದಿಗಳನ್ನು ಸೇವೆಯಿಂದ ಮುಕ್ತಗೊಳಿಸುವ ಕುರಿತು ಸದಸ್ಯರು ಕೇಳಿದ ಮಾಹಿತಿಯನ್ನು ನೀಡುತ್ತ 70 ವರ್ಷ ಪೂರ್ಣಗೊಳಿಸಿದ ಸಿಬ್ಬಂದಿಗಳನ್ನು ಈ ವರ್ಷದ ಪ್ರವೇಶ ಪ್ರಕ್ರಿಯ ಮುಗಿಯುವವರೆಗೆ ಮುಂದುವರೆಸಲಾಗುವುದು ಎಂದು ತಿಳಿಸಲಾಯಿತು. ಈ ಹಂತದಲ್ಲಿ ಸದಸ್ಯರಾದ ಡಾ:ಎನ್. ನರಸಿಂಹಮೂರ್ತಿ ಯವರು ಕಲಾ ನಿಕಾಯದ ವಿವಿಧ ವಿಭಾಗಗಳಲ್ಲಿ ಸಂಯೋಜಕರಾಗಿ 70 ವರ್ಷ ಪೂರೈಸಿರುವ ನಿವೃತ್ತ ಪ್ರಾಧ್ಯಾಪಕರನ್ನು ನೇಮಕ ಮಾಡಿರುವುದು ಹಾಗೂ ಕನ್ನಡ ಸ್ನಾತಕೋತ್ತರ ವಿಭಾಗಕ್ಕೆ ವಿಶ್ವವಿದ್ಯಾಲಯದ ಎರವಲು ಸೇವೆಯಿಂದ ಮುಕ್ತಗೊಳಿಸಿದ ನಂತರ ಡಾ.ಕೆ.ವೈ.ನಾರಾಯಣಸ್ವಾಮಿ ಅವರನ್ನು ಸಂಯೋಜಕರಾಗಿ ಮುಂದುವರೆಸಿರುವುದಕ್ಕೆ ಆಕ್ಷೇಪಣೆ ವ್ಯಕ್ತ ಪಡಿಸಿದರು.

ಕುಲಪತಿಗಳು ವಿವರಣೆ ನೀಡುತ್ತಾ, ಹೊಸ ವಿಭಾಗಗಳನ್ನು ವ್ಯವಸ್ಥಿತವಾಗಿ ಕಟ್ಟಲು ನುರಿತ ಅನುಭವಿ ಶಿಕ್ಷಕರು ಬೇಕಾಗುತ್ತದೆ. ಆದರೆ, ಇಂತಹ ಶಿಕ್ಷಕರು ಅರ್ಜಿಸಲ್ಲಿಸಲು ಇಷ್ಟಪಡುವುದಿಲ್ಲ. ವಿಶ್ವವಿದ್ಯಾಲಯ ಅಂಥವರನ್ನು ಗುರುತಿಸಿ ಅವರನ್ನು ಅಹ್ವಾನಿಸಿ ಜಾವಬ್ದಾರಿ ನೀಡಬೇಕಾಗುತ್ತದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಹೊಸ ಪಠ್ಯಕ್ರಮ ಜಾರಿಯಲ್ಲಿ ತಂದಿರುವುದರಿಂದ ಹಿರಿಯ ಪ್ರಾಧ್ಯಾಪಕರ ಸಲಹೆ ಮಾರ್ಗದರ್ಶನಗಳು ಕಾಲಕಾಲಕ್ಕೆ ಬೇಕಾದ ಕಾರಣ ನಿವೃತ್ತ ಪ್ರಾಧ್ಯಾಪಕರನ್ನು ಸಂಯೋಜಕರಾಗಿ ಮುಂದುವರೆಸಲಾಗಿದೆ ಎಂದು ತಿಳಿಸಿದರು. ಈಗಾಗಲೇ ಅತಿಥಿ ಉಪನ್ಯಾಸಕರ ಅರ್ಜಿಗಳನ್ನು ಅಹ್ವಾನಿಸಿದ್ದು, ಅವರುಗಳಲ್ಲಿ ವಿಭಾಗದ ಕೆಲಸ ಕಾರ್ಯಗಳನ್ನು ನಿರ್ವಹಿಸಬಹುದಾದಂಥ ಅರ್ಹರನ್ನು ಗುರುತಿಸಿ ಯುಜಿಸಿ ನಿಯಮಗಳಂತೆ ಅತಿಥಿ ಉಪನ್ಯಾಸಕರಾಗಿ ನೇಮಕಮಾಡಿ ಆ ಕೆಲಸದ ಜೊತೆಗೆ ಸಂಯೋಜಕರ ಜವಾಬ್ದಾರಿಯನ್ನು ವಹಿಸಲಾಗುವುದು. ಸದರಿ ನಿವೃತ್ತ ಪ್ರಾಧ್ಯಾಪಕರನ್ನು ವಿಶೇಷ / ಅತಿಥಿ ಉಪನ್ಯಾಸಕರಾಗಿ ಮುಂದುವರೆಸಲಾಗುವುದು ಎಂದು ತಿಳಿಸಿದರು. ಈ ಎಲ್ಲಾ ಪ್ರಕ್ರಿಯೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

4) ಸದಸ್ಯರಾದ ಡಾ:ಎನ್.ನರಸಿಂಹಮೂರ್ತಿಯವರು ಕಳೆದ ಸಿಂಡಿಕೇಟ್ ಸಭೆಯಲ್ಲಿ ವಿಭಾಗಗಳ ಸಂಯೋಜಕರ ನೇಮಕಾತಿಗಾಗಿ ಕುಲಪತಿಗಳಿಗೆ ಅಧಿಕಾರ ನೀಡಲಾಗಿತ್ತು. ಈ ಕುರಿತು ಅನುಸರಿಸಿದ ಮಾನದಂಡಗಳ ವಿವರಣೆ ಬಯಸಿದರು.

ಕುಲಪತಿಗಳು ವಿವರ ನೀಡುತ್ತಾ, ಹೊಸದಾಗಿ ಸ್ನಾತಕೋತ್ತರ ವಿಭಾಗಗಳನ್ನು ಪ್ರಾರಂಭಿಸುತ್ತಿರುವುದರಿಂದ, ಹಿರಿಯರ ಹಾಗೂ ಮಾಜಿ ಕುಲಪತಿಗಳ ಅಭಿಪ್ರಾಯ ಪಡೆದು ಅನುಭವಿ ಹಾಗೂ ಅರ್ಹ ಪ್ರಾಧ್ಯಾಪಕರನ್ನು ಗುರುತಿಸಿ ಸಂಯೋಜಕರ ನೇಮಕ ಮಾಡಲಾಗಿದೆ ಅವರುಗಳಲ್ಲಿ ಸಸ್ಯವಿಜ್ಞಾನದ ಸಂಯೋಜಕರು ರಾಜಿನಾಮೆ ನೀಡಿರುತ್ತಾರೆ. ಪ್ರೊ:ಕೆ.ವೈ. ನಾರಾಯಣಸ್ವಾಮಿ ಕುರಿತು ತಿಳಿಸುತ್ತಾ, ಅವರು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯಾದ ನಂತರ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರ ಬಿಡುವಿನ ಅವಧಿಯಲ್ಲಿ ಯಾವುದೇ ಸಂಭಾವನೆ ಇಲ್ಲದೆ ಗೌರವ ಸಂಯೋಜಕರಾಗಿ ಮುಂದುವರೆಸಲಾಗಿದೆ. ಕನ್ನಡ ವಿಭಾಗದ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಸ್ವೀಕರಿಸಲಾದ ಒಟ್ಟು ಅರ್ಜಿಗಳಿಂದ ಒಬ್ಬ ಅರ್ಹರನ್ನು ಸಂಯೋಜಕರಾಗಿ ನೇಮಿಸಲು ಕ್ರಮ ಕೈಕೊಳ್ಳಲಾಗುವುದೆಂದು ತಿಳಿಸಿದರು.

ಚರ್ಚೆಯ ನಂತರ ಇತಿಹಾಸ ವಿಭಾಗದ ಪ್ರೊ. ಎಸ್. ಚಂದ್ರಶೇಖರ್, ಆಂಗ್ಲ ವಿಭಾಗದ ಡಾ. ಟಿ. ವೆಂಕಟೇಶಮೂರ್ತಿ, ಹಾಗೂ ಕನ್ನಡ ವಿಭಾಗದ ಗೌರವ ಸಂಯೋಜಕರಾದ ಪ್ರೊ:ಕೆ.ವೈ. ನಾರಾಯಣಸ್ವಾಮಿ ಸಲ್ಲಿಸಿರುವ ರಾಜಿನಾಮೆಯನ್ನು ದಿನಾಂಕ 01.09.2019 ಕ್ಕೆ ಅನ್ವಯಿಸಿ ಅಂಗೀಕರಿಸಲು ತೀರ್ಮಾನಿಸಲಾಯಿತು, ಹಾಗೂ ಉಳಿದಂತೆ ಇತರ ಸಂಯೋಜಕರ ನೇಮಕವನ್ನು ಅನುಮೋದಿಸಿ, ಇನ್ನು ಮುಂದೆ ಸ್ವೀಕರಿಸಲಾದ ಅರ್ಜಿಗಳಿಂದ ನೇಮಕ ಮಾಡಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

5) ಡೀನರನ್ನು ಹೊಸ ವಿಭಾಗಗಳ ಮುಖ್ಯಸ್ಥರಾಗಿ ನೇಮಕ ಮಾಡ ಬೇಕೆಂದು ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿ ಅವರು ಪ್ರಸ್ತಾಪಿಸಲು, ಡೀನರು ಸ್ನಾತಕೋತ್ತರ ವಿಭಾಗಗಳ ದೈನಂದಿನ ಆಡಳಿತ ನಿರ್ವಹಿಸುವುದು ಉಚಿತವಲ್ಲವೆಂದು ಎಂದು ತಿಳಿಸಲಾಯಿತು.

6) CII ಜೊತೆಗಿನ MoU ಕುರಿತಂತೆ ಆಗಿರುವ ಬೆಳವಣಿಗೆಗಳ ಕುರಿತು ಸದಸ್ಯರು ಮಾಹಿತಿ ಬಯಸಿದರು. ಈಗಾಗಲೇ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಅಗತ್ಯ ತರಬೇತಿ ನೀಡುತ್ತಿದ್ದಾರೆ ಎಂದು ತಿಳಿಸಿ ಈ ಕುರಿತು ಒಂದು Steering Committee ರಚಿಸಲಾಗಿದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

ಮೇಲೆ ನಮೋದಿಸಿದ ತಿದ್ದುಪಡಿಗಳೊಂದಿಗೆ ದಿನಾಂಕ 19.07.2019 ರಂದು ಜರುಗಿದ 2ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

ವಿಷಯ ಸಂಖ್ಯೆ-2: ದಿನಾಂಕ 19.07.2019 ರಂದು ಜರುಗಿದ ಸಿಂಡಿಕೇಟ್ 2ನೇ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಕೊಂಡ ಕ್ರಮದ ವರದಿ

ಕೈಕೊಂಡ ಕ್ರಮದ ವರದಿಯ ಜೊತೆಗೆ ನೀಡಲಾದ ಖರ್ಚು ವೆಚ್ಚಗಳ ವಿವರಗಳ ಕುರಿತಂತೆ ಸದಸ್ಯರಾದ ಶ್ರೀಹೆಚ್.ಆರ್. ಸತೀಶ್ ರವರು, ಭೌತಶಾಸ್ತ್ರ ಕಟ್ಟಡ, ಕುಲಸಚಿವರು(ಮೌ)ರವರ ಕೊಠಡಿ ನವೀಕರಣಕ್ಕಾಗಿ ವೆಚ್ಚಮಾಡಿರುವ ಮೊತ್ತ ಅಧಿಕವಾಗಿದೆ ಎಂದು ತಿಳಿಸಿದರು.

ಈ ಕುರಿತು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿ ಅನುಮೋದನೆ ಪಡೆದು ಕಾಮಗಾರಿ ಕೈಕೊಳ್ಳಲಾಗಿದೆ ಎಂದು ಕುಲಪತಿಗಳು ತಿಳಿಸಿದರು.

ಶ್ರೀ ಸತೀಶ್ ರವರು ಪ್ರತಿಕ್ರಿಯ ನೀಡುತ್ತಾ, ಲೋಕೋಪಯೋಗಿ ಇಲಾಖೆ, SR ದರಗಳ ಕುರಿತು ತಾಂತ್ರಿಕ ಅನುಮೋದನೆ ನೀಡುತ್ತದೆ. ಕಾಮಗಾರಿಯ ಅಳತೆ ಹಾಗೂ ಬಿಲ್ಲುಗಳನ್ನು ಹಾಗೂ M.B ಪುಸ್ತಕವನ್ನು ಇಂಜಿನಿಯರ್ ಸಿದ್ಧಪಡಿಸುತ್ತಾರೆ. ಇದನ್ನು ಧೃಢೀಕರಿಸಲು ವಿಶ್ವವಿದ್ಯಾಲಯದಲ್ಲಿ ಪೂರ್ಣಾವಧಿಯ ಇಂಜಿನಿಯರ್ ಇರ ಬೇಕಾಗುತ್ತದೆ ಎಂದು ತಿಳಿಸಿದರು. ಡಾ:ಎನ್. ನರಸಿಂಹಮೂರ್ತಿ ಯವರು ನಿವೃತ್ತ ಇಂಜಿನಿಯರ್ M.B ಪುಸ್ತಕ ಬರೆಯುವಂತಿಲ್ಲವೆಂದು ತಿಳಿಸಿದರು.

ಈ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸುವ ಉದ್ದೇಶದಿಂದ ವಿಶ್ವವಿದ್ಯಾಲಯದ ಆವರಣದಲ್ಲಿರುವ ಕಟ್ಟಡಗಳ ನಿರ್ವಹಣೆ ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿ ಕೊಡುವುದು ಸೂಕ್ತವೆಂದು ಶ್ರೀ ಸತೀಶ್ ರವರು ತಿಳಿಸಿದರು.

ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ.ಹೆಚ್.ಆರ್. ಸತೀಶ್ ರವರು ಲೋಕೋಪಯೋಗಿ ಇಲಾಖೆಗೆ ಕಟ್ಟಡಗಳ ನಿರ್ವಹಣೆ ವಹಿಸಿಕೊಡುವ ಕುರಿತು ಇಲಾಖೆಯೊಂದಿಗೆ ಸಮಾಲೋಚಿಸಿ ವಿಶ್ವವಿದ್ಯಾಲಯದ ವತಿಯಿಂದ ಈ ಕುರಿತು ಕೈಕೊಳ್ಳ ಬೇಕಾದ ಕ್ರಮಗಳ ಕುರಿತು ಮಾಹಿತಿ ಪಡೆದು ಸಲ್ಲಿಸುವಂತೆ ತಿಳಿಸಿದರು.

ವಿಶ್ವವಿದ್ಯಾಲಯಕ್ಕೆ ಒಬ್ಬ ಪೂರ್ಣಕಾಲಿಕ ಖಾಯಂ ಅಭಿಯಂತರರು ಬರುವವರೆಗೆ ಅಥವಾ ಪರ್ಯಾಯ ವ್ಯವಸ್ಥೆ ಆಗುವವರೆಗೆ ಈಗಿರುವ ನಿವೃತ್ತ ಇಂಜಿನಿಯರ್ ಸೇವೆಯನ್ನು ಮುಂದುವರೆಸಬೇಕಾಗುತ್ತದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು.

29/8/19

ಖರ್ಚುವೆಚ್ಚಗಳ ಕುರಿತು ನೀಡಲಾದ ಮಾಹಿತಿ ಕುರಿತಂತೆ ಸದಸ್ಯರಾದ ಶ್ರೀಹೆಚ್.ಆರ್. ಸತೀಶ್, ಡಾ.ಅರವಿಂದ ಹಾಗೂ ಡಾ.ನರಸಿಂಹಮೂರ್ತಿ ಯವರು ವ್ಯಕ್ತಪಡಿಸಿದ ಅನಿಸಿಕೆಗಳ ಕುರಿತು ಅಗತ್ಯ ಮಾಹಿತಿಯನ್ನು ಕುಲಪತಿಗಳು ನೀಡಿದರು. ಈ ಎಲ್ಲಾ ಖರ್ಚುವೆಚ್ಚಗಳ ಕುರಿತು ರಾಜ್ಯ ಲೆಕ್ಕಪತ್ರ ಇಲಾಖೆ ಲೆಕ್ಕ ತನಿಖೆ ಮಾಡಿ ನೀಡುವ ವರದಿಯನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ನಡಾವಳಿಯ ವಿಷಯ ಸಂಖ್ಯೆ 6 ಕುರಿತಂತೆ ಡಾ:ಎನ್. ನರಸಿಂಹಮೂರ್ತಿ ಅವರು ಅತಿಥಿ ಉಪನ್ಯಾಸಕರಿಗೆ ಗೌರವ ಸಂಭಾವನೆ ನೀಡುವ ಕುರಿತು ಸರ್ಕಾರದ ಆದೇಶ ಬಂದಿರುವ ಕುರಿತು ಮಾಹಿತಿ ಕೋರಿದರು.

ಕುಲಪತಿಗಳು ಯು.ಜಿ.ಸಿ ನಿಯಮಾವಳಿಗಳ ಪ್ರಕಾರ ಗೌರವ ಸಂಭಾವನೆ ನೀಡಲು ಕಳೆದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನ ಕೈಕೊಳ್ಳಲಾಗಿದೆ. ಅದರಂತೆ ಮುಂದುವರೆಯಲಾಗುವುದು ಎಂದು ತಿಳಿಸಿದರು.

ವಿಷಯ ಸಂಖ್ಯೆ 8 ಕುರಿತಂತೆ ಸದಸ್ಯರಾದ ಶ್ರೀ ಸತೀಶ್, ಡಾ.ಅರವಿಂದ ಹಾಗೂ ಡಾ. ನರಸಿಂಹಮೂರ್ತಿ ಪ್ರಸ್ತಾಪಿಸಿ, CBSMSನ ಅಂದಿನ ನಿರ್ದೇಶಕರಾದ ಪ್ರೊ. ಜನಾರ್ಧನಮ್ ರವರು ಈ ಪ್ರಕರಣ ನಡೆದ ಅವಧಿಯಲ್ಲಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿರುವುದರಿಂದ ಅವರು ಜವಾಬ್ದಾರರಾಗುತ್ತಾರೆ ಎಂದು ಕಳೆದ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು ಎಂದು ತಿಳಿಸಿ ಪೋಲೀಸ್ ಠಾಣೆಗೆ ದೂರು ದಾಖಲಿಸಿರುವ ಕುರಿತು ಮಾಹಿತಿ ಕೋರಿದರು.

ಈ ಕುರಿತು ರಚಿಸಿದ ವಿಚಾರಣಾ ಸಮಿತಿ ಸಮಗ್ರವಾದ ವಿಚಾರಣೆ ನಡೆಸುವದು ಎಂದು ತಿಳಿಸಿ ಪೋಲೀಸ್ ಠಾಣೆಗೆ ದೂರು ನೀಡಲಾಗಿದೆ. FIR ದಾಖಲಿಸಲು ಪೋಲೀಸ್ ಅಧಿಕಾರಿಗಳು ಕೆಲವು ದಾಖಲೆಗಳನ್ನು ಕೋರಿದ್ದಾರೆ. ಅವುಗಳನ್ನು ಸಲ್ಲಿಸಲು ಕ್ರಮ ಕೈಕೊಳ್ಳಲಾಗುತ್ತಿದೆ ಎಂದು ಕುಲಪತಿಗಳು ತಿಳಿಸಿದರು.

ವಿಷಯ ಸಂಖ್ಯೆ 9 ಕುರಿತಂತೆ "ವಿಶ್ವವಿದ್ಯಾಲಯದ ನ್ಯಾಯವಾದಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿ / ಪಂಗಡಗಳಿಗೆ ಸಂಬಂಧಿಸಿದವರು ಇರಬೇಕು" ಎಂಬ ತಿದ್ದುಪಡಿಯೊಂದಿಗೆ ಧೃಢೀಕರಿಸಲಾಯಿತು.

29/8/19

ಸಿಂಡಿಕೇಟ್ ನಿರ್ಣಯ:

ಮೇಲೆ ನಮೂದಿಸಿದ ಬದಲಾವಣೆಗಳಿಗೆ ಒಳಪಟ್ಟು ದಿನಾಂಕ 19.07.2019 ರಂದು ಜರುಗಿದ 2ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ-3:** ಸರ್ಕಾರಿ ಆದೇಶ ದಿನಾಂಕ 11.01.2019 ರ ಪ್ರಕಾರ ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿರುವ ಹಬ್ಬದ ಮುಂಗಡವನ್ನು ಪರಿಷ್ಕರಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಹಬ್ಬದ ಮುಂಗಡ ಹಣವನ್ನು ರೂ.5,000 ದಿಂದ ರೂ.10,000 ಗಳಿಗೆ ಹೆಚ್ಚಳ ಮಾಡಿ ಹೊರಡಿಸಿದ ಸರ್ಕಾರದ ಆದೇಶವನ್ನು ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ವಿಸ್ತರಿಸಲು ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ-4:** ಸರ್ಕಾರಿ ಆದೇಶ ದಿನಾಂಕ 11.01.2019 ರ ಪ್ರಕಾರ ಬೋಧಕೇತರ ನೌಕರರ ವಾರ್ಷಿಕ ವೇತನ ಬಡ್ತಿಯ ದಿನಾಂಕವನ್ನು ಪರಿಷ್ಕರಿಸಿ ನಿಯತಗೊಳಿಸುವ ಬಗ್ಗೆ

ಸಿಂಡಿಕೇಟ್ ನಿರ್ಣಯ:

ಸರ್ಕಾರದ ಅದೇಶದ ಮೇರೆಗೆ ವಾರ್ಷಿಕ ವೇತನ ಬಡ್ತಿಯ ದರವನ್ನು ಪರಿಷ್ಕರಿಸಿ ನಿಯತಗೊಳಿಸಿ ದಿನಾಂಕ 01.07.2019 ರಿಂದ ವಾರ್ಷಿಕ ವೇತನವನ್ನು ಮಂಜೂರಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ-5:** Reconstitution of Board of Studies in Physics(PG)

ಸಿಂಡಿಕೇಟ್ ನಿರ್ಣಯ:

ಕೆಲವು ಸದಸ್ಯರು ಮುಖ್ಯ ಸಲಹೆಗಾರರೆಂದು ಪ್ರಸ್ತಾಪಿಸಿರುವ ಕುರಿತು ವಿವರ ಬಯಸಿದರು. ಗಣ್ಯವ್ಯಕ್ತಿಗಳಾದ ಮಾಜಿ ಕುಲಪತಿಗಳು, ವಿಜ್ಞಾನಿಗಳು, ಶಿಕ್ಷಣ ತಜ್ಞರು ಇತ್ಯಾದಿ ಪ್ರಮುಖರ ಸೇವೆಯನ್ನು ಮುಖ್ಯ ಸಲಹೆಗಾರರಾಗಿ ಪಡೆಯುವುದು ಗೌರವ ಸೂಚಕವೆಂದು ಕುಲಪತಿಗಳು ತಿಳಿಸಿದರು. ನಂತರ ಕೈಕೊಂಡ ಕ್ರಮಕ್ಕೆ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ-6:** ಪರಿನಿಯಮಗಳ ರಚನೆಗಾಗಿ ಸಮಿತಿಯನ್ನು ರಚಿಸುವ ಕುರಿತು

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2019ನ್ನು ಕುಲಾಧಿಪತಿಗಳು, ರಾಷ್ಟ್ರಪತಿಗಳ ಅನುಮೋದನೆಗಾಗಿ ಸಲ್ಲಿಸಿದ್ದು ಅದು ಸಧ್ಯದಲ್ಲೇ ಅಂಕಿತಗೊಂಡು ಜಾರಿಗೋಳಿಸುವ ಸಾದ್ಯತೆ ಇದೆ. ಹೊಸ ಅಧಿನಿಯಮ ಜಾರಿಗೆ ಬಂದ ಮೇಲೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಎಲ್ಲಾ ವಿಶ್ವವಿದ್ಯಾಲಯಗಳಿಗೆ ಅನ್ವಯಿಸುವ ಏಕರೂಪದ ಪರಿನಿಯಮಾವಳಿಗಳನ್ನು ಸಿದ್ಧಪಡಿಸಿ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಒದಗಿಸುತ್ತದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯದಿಂದ ಒಟ್ಟು 100 ಹುದ್ದೆಗಳು ವರ್ಗಾವಣೆಯಾಗಿದ್ದು,ಅವುಗಳಲ್ಲಿ 18 ಜನ ಬೋಧಕೇತರ ಸಿಬ್ಬಂದಿಗಳು ಅಭಿಮತ ವ್ಯಕ್ತಪಡಿಸಿ ವರ್ಗಾವಣೆ ಹೊಂದಿರುತ್ತಾರೆ. ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ವಿವಿಧ ಪ್ರವರ್ಗಗಳ ಬೋಧಕ / ಬೋಧಕೇತರ ಹುದ್ದೆಗಳನ್ನು ಸೃಜಿಸಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅವುಗಳಿಗೆ ಇನ್ನು ಒಪ್ಪಿಗೆ ದೊರಕಿರುವುದಿಲ್ಲ. ಈ ಹಿನ್ನಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವೃಂದ ಹಾಗೂ ನೇಮಕಾತಿ ನಿಯಮಗಳ ಪ್ರಕಾರ ಸಿಬ್ಬಂದಿಗಳಿಗೆ ಬಡ್ತಿ ನೀಡಲು ಕ್ರಮ ಕೈಕೊಳ್ಳಬೇಕಾಗಿದೆ ಎಂದು ತಿಳಿಸಿದರು

**ಸಿಂಡಿಕೇಟ್ ನಿರ್ಣಯ:**

1) ಪರಿನಿಯಮಗಳ ರಚನೆಗಾಗಿ ಸಮಿತಿಯನ್ನು ರಚಿಸುವ ಕುರಿತು ಹೊಸ ಅಧಿನಿಯಮ ಜಾರಿಗೆ ತರುವ ಕುರಿತು ಸರ್ಕಾರದ ತೀರ್ಮಾನಕ್ಕಾಗಿ ಕಾಯಬೇಕೆಂದು ಸಭೆ ತೀರ್ಮಾನಿಸಿತು.
2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2015 ರಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳು ಈ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವುದರಿಂದ, ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಯಾಗಿರುವ 100 ಬೋಧಕೇತರ ಹುದ್ದೆಗಳಲ್ಲಿ ನೇರ ನೇಮಕಾತಿ ಹಾಗೂ ಬಡ್ತಿಗಾಗಿ ಇರುವ ಅನುಪಾತದಂತೆ ಹುದ್ದೆಗಳನ್ನು ವಿಂಗಡನೆ ಮಾಡಿ, ಜ್ಯೇಷ್ಠತಾ ಪಟ್ಟಿ ಪ್ರಕಡಿಸಿ ಮೀಸಲಾತಿ ನಿಯಮಗಳಂತೆ ರೋಸ್ಟರ್ ಅನುಸರಿಸಿ ಬೆಂಗಳೂರು ವಿಶ್ವವಿದ್ಯಾಲಯದ ವೃಂದ ಹಾಗೂ ನೇಮಕಾತಿ ನಿಯಮಗಳ ಪ್ರಕಾರ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಕ್ರಮ ಕೈಕೊಳ್ಳಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**ವಿಷಯ ಸಂಖ್ಯೆ–7:** ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಸರ್ಕಾರದ ಆದೇಶದ ಪ್ರಕಾರ ಅನ್ವಯವಾಗುವ ಪರಿಷ್ಕೃತ ತುಟ್ಟಿ ಭತ್ಯೆ ದರಗಳನ್ನು ವಿಸ್ತರಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

**ಸಿಂಡಿಕೇಟ್ ನಿರ್ಣಯ:**

ಸರ್ಕಾರದ ಆದೇಶದ ಪ್ರಕಾರ ತುಟ್ಟಿ ಭತ್ಯೆಯನ್ನು ಶೇಕಡ 3.75 ರಿಂದ ಶೇಕಡ 6.50 ಕ್ಕೆ ಹೆಚ್ಚಳ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. ಇನ್ನು ಮುಂದೆ ಸರ್ಕಾರದ ಆದೇಶಗಳಂತೆ ಅಗತ್ಯ ಕ್ರಮ ಕೈಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ–8:** ಸರ್ಕಾರದ ಆದೇಶದ ಪ್ರಕಾರ 2019 ನೇ ಸಾಲಿನ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ನಿಯತಗೊಳಿಸುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

**ಸಿಂಡಿಕೇಟ್ ನಿರ್ಣಯ:**

ಗಳಿಕೆ ರಜೆ ಅಧ್ಯರ್ಪಿಸಿ ರಜಾವೇತನ ನೀಡುವ ಕುರಿತು ಸರ್ಕಾರದ ಆದೇಶದ ಸೌಲಭ್ಯವನ್ನು ವಿಶ್ವವಿದ್ಯಾಲಯ ಸಿಬ್ಬಂದಿಗಳಿಗೆ ವಿಸ್ತರಿಸಿ ಕೈಕೊಂಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ–9:** Appointment of Chairman to the Board of Studies in Psychology (PG & UG) for Bengaluru Central University- reg.

**ಸಿಂಡಿಕೇಟ್ ನಿರ್ಣಯ:**

ಡಾ:ಎಂ. ಶ್ರೀನಿವಾಸ, ಸಹಾಯಕ ಪ್ರಾಧ್ಯಾಪಕರು, ಮನಃಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಇವರನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಮನಃಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ನೇಮಕ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ–10:** ದಿನಾಂಕ 08.07.2019 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿಯ ಪ್ರಥಮ ಸಭೆಯ ನಡಾವಳಿಗಳ ಮೇಲೆ ದಿನಾಂಕ 19.07.2019 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪುನರ್ ಪರಿಶೀಲಿಸುವ ಕುರಿತು

**ಸಿಂಡಿಕೇಟ್ ನಿರ್ಣಯ:**

ಕ್ರೀಡಾ ಸಲಹಾ ಸಮಿತಿಯ ಪರಿಷ್ಕೃತ ನಡಾವಳಿಗಳಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಲಾಯಿತು

**ವಿಷಯ ಸಂಖ್ಯೆ–11:** Opening of a Bank Account in the name of $43^{rd}$ Indian Social Science Congress (ISSC).

**ಸಿಂಡಿಕೇಟ್ ನಿರ್ಣಯ:**

"Indian Social Science Congress" ಹೆಸರಿನಲ್ಲಿ ಬ್ಯಾಂಕ್ ಖಾತೆ ತೆಗೆಯಲು ಅನೊಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ–12:** Establishment of Procurement Cell in Bengaluru Central University

ವಿಷಯ ಸಂಖ್ಯೆ 12 ಹಾಗೂ 13 ಕುರಿತಂತೆ ವಿವರಣೆ ನೀಡಲು ವಿತ್ತಾಧಿಕಾರಿಗಳನ್ನು ಸಭೆಗೆ ಅಹ್ವಾನಿಸಲಾಯಿತು. ವಿತ್ತಾಧಿಕಾರಿಗಳು ಸಭೆಗೆ ಆಗಮಿಸಿ ಸಾರ್ವಜನಿಕ ಹಣಕಾಸು ನಿರ್ವಹಣೆ ಬಗ್ಗೆ ವಿವರಣೆ ನೀಡಿ, ವಿಶ್ವವಿದ್ಯಾಲಯದಲ್ಲಿ E-Procurement ಕೋಶ ಸ್ಥಾಪಿಸಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ಹಾಗೂ ಸಂಬಂಧಿಸಿದ ನಿಯಮಗಳ ಕುರಿತು ಅನುಭವವಿರುವ ಸಿಬ್ಬಂದಿಯ ಸೇವೆ ಅಗತ್ಯವಿದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದ ಪ್ರಾರಂಭಿಕ ಹಂತದಲ್ಲಿ ಹೆಚ್ಚಿನ ಪ್ರಮಾಣದ ಸಂಗ್ರಹಣೆ ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದ ಕೆಲಸಗಳನ್ನು ಕೈಕೊಳ್ಳಬೇಕಾಗಿದೆ. ಅವುಗಳನ್ನು ನಿರ್ವಹಿಸಲು ನಿಯಮಾವಳಿಗಳನ್ನು ತಿಳಿದುಕೊಂಡಿರುವ ನುರಿತ ಸಿಬ್ಬಂದಿಗಳ ಅಗತ್ಯತೆ ಇರುತ್ತದೆ. ಗಣಕೀಕರಣಗೊಂಡ ವ್ಯವಸ್ಥೆಯಿಂದ ಸಂಗ್ರಹಣೆಗೆ ಸಂಭಂದಿಸಿದ ಎಲ್ಲಾ ಹಂತದ ಕೆಲಸಗಳನ್ನು ನಿಖರವಾಗಿ ಹಾಗೂ ಸಮಯ ಬದ್ದವಾಗಿ ನಿರ್ವಹಿಸಲು ಸಾದ್ಯವಾಗುತ್ತದೆ ಎಂದು ತಿಳಿಸಿದರು.

ಈ ವ್ಯವಸ್ಥೆಯನ್ನು ಜಾರಿಗೆ ತರಲು ಸಿಬ್ಬಂದಿಗಳನ್ನು KEONICS ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿದರು.

**ಸಿಂಡಿಕೇಟ್ ನಿರ್ಣಯ:**

ಇ–ಸಂಗ್ರಹಣೆ ಕೋಶ ಸ್ಥಾಪಿಸಲು ಸಲ್ಲಿಸಿದ ಪ್ರಾಸ್ತಾವನೆಗೆ ಸಿಂಡಿಕೇಟ್ ಒಪ್ಪಿಗೆ ನೀಡಿತು. ಕೆಳಕಂಡ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮುಖಾಂತರ ಪಡೆಯಲು ಅನುಮೋದನೆ ನೀಡಲಾಯಿತು.

| ಪದನಾಮ | ಹುದ್ದೆಗಳ ಸಂಖ್ಯೆ | ಗೌರವ ಧನ |
|---|---|---|
| ಸಮಾಲೋಚಕರು (Consultant)– | ಒಂದು (ಅರೆಕಾಲಿಕ) | ಪ್ರತಿ ದಿವಸಕ್ಕೆ ರೂ. 4,000/– (ವಾರದಲ್ಲಿ ಎರಡು ದಿವಸಗಳು) ಪ್ರತಿ ತಿಂಗಳಿಗೆ ಗರಿಷ್ಠ ರೂ.32,000/– |
| ಅನುಭವ: ಇ–ಸಂಗ್ರಣೆಯಲ್ಲಿ ಸಂಪೂರ್ಣ ಜ್ಞಾನ ಹಾಗೂ ಇಂತಹ ಕೆಲಸ ನಿರ್ವಹಣೆಯಲ್ಲಿ 5 ವರ್ಷಗಳ ಸೇವಾ ಅನುಭವ ಹೊಂದಿರಬೇಕು. | | |
| ಸಂಗ್ರಹಣಾ ಸಹಾಯಕರು (Procurement Assistant ) | ಎರಡು (ಪೂರ್ಣಕಾಲಿಕ) | ಪ್ರತಿ ಒಬ್ಬರಿಗೆ ಪ್ರತಿ ತಿಂಗಳಿಗೆ ರೂ.25,000 |
| ಅನುಭವ: ಇ–ಸಂಗ್ರಣೆಯ ಕೆಲಸದಲ್ಲಿ ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿದ ಅನುಭವ ಹೊಂದಿರ ಬೇಕು. | | |

(1) ವಿಶ್ವವಿದ್ಯಾಲಯದ ಸಿಬ್ಬಂದಿಗಳು ಮುಂದಿನ ಎರಡು ವರ್ಷಗಳ ಒಳಗಾಗಿ ಪೂರ್ಣ ಪ್ರಮಾಣದ ಇ–ಸಂಗ್ರಹಣೆ ನಿರ್ವಹಿಸುವ ತರಬೇತಿ ಪಡೆದು ಅರ್ಹರಾದ ನಂತರ ಮೇಲೆ ನಮೂದಿಸಿದ ಸಮಾಲೋಚಕರು ಹಾಗೂ ಸಂಗ್ರಹಣಾ ಸಹಾಯಕರ ಸೇವೆಯನ್ನು ನಿಲ್ಲಿಸಲಾಗುವುದು.

(2) ಒಂದು ವರ್ಷದ ಅವಧಿಯಲ್ಲಿ ಇ–ಸಂಗ್ರಹಣೆ ಕುರಿತು ಸಂಪೂರ್ಣ ವಿವರಗಳನ್ನು ಒಳಗೊಂಡ ಕೈಪಿಡಿ ಸಿದ್ಧಪಡಿಸಬೇಕು.

ಇ–ಸಂಗ್ರಹಣೆ ಕೋಶ ಸ್ಥಾಪಿಸಲು ಕೂಡಲೇ ಅಗತ್ಯ ಕ್ರಮ ಕೈಕೊಳ್ಳಬೇಕೆಂದು ಸಿಂಡಿಕೇಟ್ ಸಭೆ ಸೂಚಿಸಿತು.

**ವಿಷಯ ಸಂಖ್ಯೆ–13:** Accounts Management of Bengaluru Central University

ವಿಶ್ವವಿದ್ಯಾಲಯದಲ್ಲಿ ನೈಪುಣ್ಯತೆ ಹೊಂದಿರುವ ಪ್ರತ್ಯೇಕವಾದ ಲೆಕ್ಕ ನಿರ್ವಹಣಾ ವ್ಯವಸ್ಥೆ ಹೊಂದುವ ಅಗತ್ಯವನ್ನು ವಿತ್ತಾಧಿಕಾರಿಗಳು ಸಭೆಗೆ ವಿವರಿಸಿದರು. ಪ್ರಸ್ತುತ ಸನ್ನಿವೇಶದಲ್ಲಿ ಶಾಸನ ಬದ್ಧವಾಗಿ ಪಾವತಿಸ ಬೇಕಾದ ವೃತ್ತಿ ತೆರಿಗೆ, ಆದಾಯ ತೆರಿಗೆ, ಜಿ.ಎಸ್.ಟಿ ಪಾವತಿ ಹಾಗೂ ಪ್ರತಿ ತಿಂಗಳು ಬ್ಯಾಂಕಿನ ಆರ್ಥಿಕ ವ್ಯವಹಾರಗಳೊಂದಿಗೆ ವಿಶ್ವವಿದ್ಯಾಲಯದ ಲೆಕ್ಕ ಹೊಂದಾಣಿಕೆ ಮಾಡುವುದು (reconciliation). ವಿಶ್ವವಿದ್ಯಾಲಯದ ವಿವಿಧ ಆದಾಯ ಮೂಲಗಳಾದ ಮಹಾವಿದ್ಯಾಲಯಗಳು/ ವಿದ್ಯಾರ್ಥಿಗಳು ಪಾವತಿಸುವ ಶುಲ್ಕಗಳು, ಸರ್ಕಾರ, ಯು.ಜಿ.ಸಿ ಹಾಗೂ ಇನ್ನಿತರ ಸಂಸ್ಥೆಗಳಿಂದ ಬರುವ ಅನುದಾನಗಳನ್ನು ನಿಗಾ

ವಹಿಸುವುದು ಹಾಗೂ ವೆಚ್ಚಗಳ ನಿಯಂತ್ರಣ, ಇತ್ಯಾದಿ ಕೆಲಸಕ್ಕಾಗಿ ನುರಿತ ಲೆಕ್ಕ ಪರಿಶೋಧಕರ (Chartered Accountant) ಸಂಸ್ಥೆಗಳಿಂದ ಲೆಕ್ಕನಿರ್ವಹಣಾ ತಂಡವನ್ನು ಈ–ಟೆಂಡರ್ ಮುಖಾಂತರ ಪಡೆಯುಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಡಾ:ಎನ್. ನರಸಿಂಹಮೂರ್ತಿಯವರು ವಿಶ್ವವಿದ್ಯಾಲಯದ ಲೆಕ್ಕ ನಿರ್ವಹಣೆ Chartered Accountant ಗೆ ವಹಿಸುವ ಕುರಿತು ಸರ್ಕಾರದಲ್ಲಿ ಲಭ್ಯವಿರುವ ಮಾಹಿತಿ ಕೋರಿದರು. ವಿತ್ತಾಧಿಕಾರಿಗಳು, ಎರಡು ವಿಧವಾದ ಲೆಕ್ಕ ಪರಿಶೋಧನೆ ಮಾಡಿಸುವ ವ್ಯವಸ್ಥೆಯ ಬಗ್ಗೆ ವಿವರಿಸಿದರು. Propriety Audit- ರಾಜ್ಯ ಸರ್ಕಾರದ ಲೆಕ್ಕ ಪರಿಶೋಧನಾ ಇಲಾಖೆಯಿಂದ ಮಾಡಿಸಲಾಗುವುದು. ಆದಾಯ ತೆರಿಗೆ ವಿನಾಯಿತಿಗಳ, ಜಿ.ಎಸ್.ಟಿ ತೆರಿಗೆ, ಬೇರೆ ಸರ್ಕಾರೇತರ ಸಂಸ್ಥೆಗಳ ಸಿ.ಎಸ್.ಆರ್ ಅನುದಾನ ಪಡೆಯುವಾಗ Chartered Accountant ರಿಂದ ಲೆಕ್ಕ ಪರಿಶೋಧನೆ ಅನಿವಾರ್ಯವಾಗುತ್ತದೆ. ಹೀಗೆ Chartered Accountant ರಿಂದ ಧೃಡೀಕೃತ ಶಾಸನಬಜದ್ದ (Statutory Audit) ಲೆಕ್ಕ ಪರಿಶೋಧನಾ ವರದಿಯು ರಾಜ್ಯ ಸರ್ಕಾರದ ಲೆಕ್ಕ ಪರಿಶೋಧನೆಗೆ ಪೂರಕವಾಗಿರಲಿದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

ಚರ್ಚೆಯನಂತರ ಸರ್ಕಾರದ ಲೆಕ್ಕ ನಿರ್ವಹಣಾ ಕೆಲಸದಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ ಒಬ್ಬರು ಹಿರಿಯ ಲೆಕ್ಕ ನಿರ್ವಹಣಾ ಸಮಾಲೋಚಕರು ಹಾಗೂ ಇಬ್ಬರು ಪೂರ್ಣಾವಧಿ ಲೆಕ್ಕ ಸಹಾಯಕರ ಸೇವೆಯನ್ನು ಲೆಕ್ಕ ಪರಿಶೋಧಕರ ಸಂಸ್ಥೆಗಳಿಂದ ಇ–ಟೆಂಡರ್ ಮುಖಾಂತರ ಪಡೆಯಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಸಿಂಡಿಕೇಟ್ ಸಭೆ ಮೇಲಿನ ಎರಡು ಪ್ರಸ್ತಾವನೆಗಳಿಗೆ ಮೆಚ್ಚುಗೆ ಸೂಚಿಸಿ ಇವುಗಳನ್ನು ಕಾರ್ಯರೂಪಕ್ಕೆ ತರಲು ಕೂಡಲೇ ಕ್ರಮ ಕೈಕೊಳ್ಳ ಬೇಕೆಂದು ಸೂಚಿಸಿತು.

**ಸಾಮಾನ್ಯ ವಿಷಯಗಳ ಚರ್ಚೆ;**
General Discussion

(1) ಕ್ಯಾಂಟೀನ್ ಕಟ್ಟಡ ನಿರ್ಮಾಣಕ್ಕಾಗಿ ರಾಜ್ಯ ಸಭಾ ಸದಸ್ಯರು ತಮ್ಮ ವಿವೇಚನಾ ನಿಧಿಯಿಂದ 20.00 ಲಕ್ಷಗಳನ್ನು ನೀಡಲು ಒಪ್ಪಿರುತ್ತಾರೆ. ಇದೇ ರೀತಿ ಬೇರೆ ಸಂಸತ್ ಸದಸ್ಯರನ್ನು ಹಾಗೂ ಶಾಸಕರನ್ನು ಅನುದಾನ ನೀಡಲು ಕೋರಿರುವುದಾಗಿ ಸದಸ್ಯರಾದ ಶ್ರೀ ಸತೀಶ್ ರವರು ತಿಳಿಸಿದರು. ಕುಲಪತಿಗಳು ಶ್ರೀ ಸತೀಶ್ ರವರನ್ನು ಅಭಿನಂದಿಸಿದರು.

Indian Social Science Congress ಗೆ Organising Joint Scretary ಯನ್ನು ನೇಮಿಸಿರುವ ಕುರಿತು ಕೈಕೊಂಡ ಕ್ರಮಗಳ ಬಗ್ಗೆ ಡಾ:ಎನ್. ನರಸಿಂಹಮೂರ್ತಿ ಯವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಆದಕ್ಕೆ ಕುಲಪತಿಗಳು ವಿವರಣೆ ನೀಡಿ. Indian Social Science Congress ಬೃಹತ್ ಪ್ರಮಾಣದ ಕಾಯಕ್ರಮವಾಗಿದ್ದು. ಇದು ಕೆಲವೇ ವ್ಯಕ್ತಿಗಳಿಂದ ನಿರ್ವಹಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಮಾಜ ವಿಜ್ಞಾನವಲ್ಲದೆ ವಿಜ್ಞಾನ ಹಾಗೂ ವಾಣಿಜ್ಯ ವಿಷಯಗಳು ಒಳಗೊಂಡಿವೆ. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವ್ಯಾಪ್ತಿಯ ಬಹು ಸಂಖ್ಯೆಯ (ಶೇ.60–70) ಮಹಾವಿದ್ಯಾಲಯಗಳು ವಾಣಿಜ್ಯ ಮಹವಿದ್ಯಾಲಯಗಳಾಗಿದ್ದು ಇಂತಹ ಕಾರ್ಯಕ್ರಮ ಆಯೋಜನೆಗೆ ಅವರಿಗೆ ಇರುವ ಅನುಭವದ ಹಿನ್ನಲೆಯಲ್ಲಿ ಡಾ: ನರಸಿಂಹಮೂರ್ತಿ ಯವರ ಬದಲಿಗೆ ವಾಣಿಜ್ಯ ನಿಕಾಯದ ಡೀನರಾದ ಡಾ:ಎಂ. ಮುನಿರಾಜು ಹಾಗೂ Indian Social Science Academy ಯ Executive Member ಮತ್ತು ಈ ಹಿಂದೆ ಮೈಸೂರು ವಿಶ್ವವಿದ್ಯಾಲಯದಲ್ಲಿ ISSC ನ್ನು ಆಯೋಜಿಸಿದ ಅನುಭವ ಹೊಂದಿರುವ ಕರ್ನಾಟಕರವರಾದ ಖ್ಯಾತ ISRO ವಿಜ್ಞಾನಿ ಡಾ: ಜಗನ್ನಾಥರಾವ್ ಅವರನ್ನು ಜಂಟಿ ಸಂಘಟನಾ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕೆ ಯು.ಜಿ.ಸಿ, ಎಂ.ಹೆಚ್.ಆರ್.ಡಿ ಇತ್ಯಾದಿ ಸಂಸ್ಥೆಗಳಿಂದ ಸಿಗಬಹುದಾದ ಅನುದಾನ ಕುರಿತು ಸಭೆಗೆ ವಿವರಣೆ ನೀಡಿದರು. ಇದಕ್ಕಾಗಿ ವಿಶೇಷ ಅನುದಾನ ನೀಡಲು ಕರ್ನಾಟಕ ಸರ್ಕಾರವನ್ನು ಕೋರಲಾಗುವುದು ಎಂದು ತಿಳಿಸಿದರು. ಶಿಕ್ಷಣ ಸಂಸ್ಥೆಗಳಿಂದ ದೇಣಿಗೆ ಹಾಗೂ ನೊಂದಣಿ ಶುಲ್ಕ ರೂಪದಲ್ಲಿ ಧನಸಹಾಯ ಒದಗಿ ಬರಲಿದೆ. ಇದಲ್ಲದೆ ದಾನಿಗಳಿಂದ ಕಲವು ಕಾರ್ಯಕ್ರಮಗಳ ಪ್ರಾಯೋಜಕತ್ವಕ್ಕಾಗಿ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಖರ್ಚು ವೆಚ್ಚಗಳ ನಿರ್ವಹಣೆಗೆ ಕೆಳಕಂಡ ಸದಸ್ಯರನ್ನು ಒಳಗೊಂಡಂತೆ ಹಣಕಾಸು ಸಮಿತಿ ರಚಸಲಾಗುವುದು ಎಂದು ತಿಳಿಸಿದರು.

1. ಕುಲಪತಿಗಳು .. ಅಧ್ಯಕ್ಷರು

2. ಕುಲಸಚಿವರು .. ಸದಸ್ಯರು

3. ಕುಲಸಚಿವರು (ಮೌ) .. ಸದಸ್ಯರು

4. ಶ್ರೀ.ಹೆಚ್.ಆರ್. ಸತೀಶ್ .. ಸದಸ್ಯರು
ಸಿಂಡಿಕೇಟ್ ಸದಸ್ಯರು.

5. ಶ್ರೀ.ಎಂ.ನಾರಾಯಣಸ್ವಾಮಿ .. ಸದಸ್ಯರು
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು

6. ಪ್ರೊ: ಎಂ. ಮುನಿರಾಜು .. ಸದಸ್ಯರು
ಜಂಟಿ ಸಂಘಟನಾ ಕಾರ್ಯದರ್ಶಿಗಳು, ISSC

7. ಪ್ರೊ: ಜಗನ್ನಾಥರಾವ್ .. ಸದಸ್ಯರು
ಜಂಟಿ ಸಂಘಟನಾ ಕಾರ್ಯದರ್ಶಿಗಳು, ISSC

8. ವಿತ್ತಾಧಿಕಾರಿಗಳು .. ಸದಸ್ಯ ಕಾರ್ಯದರ್ಶಿಗಳು

ಅಗತ್ಯವಾದಲ್ಲಿ ಕುಲಪತಿಗಳು ಇನ್ನು 1–2 ಸದಸ್ಯರನ್ನು ನೇಮಕ ಮಾಡಬಹುದೆಂದು ಅಭಿಪ್ರಾಯ ವ್ಯಕ್ತ ಪಡಿಸಿ ಅನುಮೋದನೆ ನೀಡಲಾಯಿತು.

(2) ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ನಿರ್ವಹಣೆ ಮಾಡುತ್ತಿರುವ ಕುರಿತು ಸದಸ್ಯರಾದ ಡಾ: ಅರವಿಂದ ರವರು ಮಾಹಿತಿ ಕೋರಿದರು. ವಿದ್ಯಾರ್ಥಿಗಳ ದತ್ತಾಂಶ ನಿರ್ವಹಣೆಗೆ ನಿರ್ದಿಷ್ಟವಾದ ಸರ್ವರ್ ಇದ್ದು, ಅದನ್ನು ಪರೀಕ್ಷಾ ಕಲಸ ನಿರ್ವಹಿಸುವ ಖಾಸಗಿ ಸಂಸ್ಥೆ– ಕುಲಸಚಿವರು (ಮೌಲ್ಯಮಾಪನ) ರವರ ಉಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತಿದೆ. ಈ ಕುರಿತು ಅಗತ್ಯ ಉಪಬಂಧಗಳನ್ನು ಒಪ್ಪಂದ ಪತ್ರ ಒಳಗೊಂಡಿರುತ್ತದೆ ಎಂದು ತಿಳಿಸಿದರು.

ವಿತ್ತಾಧಿಕಾರಿಗಳು ಸರ್ಕಾರದ ಡಾಟಾ ಸೆಂಟರ್ ಮುಖಾಂತರ ದತ್ತಾಂಶಗಳನ್ನು ನಿರ್ವಹಿಸಲು ಸರ್ಕಾರದ ಸಂಬಂಧಿಸಿದ ಇಲಾಖೆಯೊಂದಿಗೆ ಚರ್ಚೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಅದು ಕಾರ್ಯರೂಪಕ್ಕೆ ಬಂದಲ್ಲಿ ನಮ್ಮಲ್ಲಿ ಇರುವ ಸರ್ವರ "mirror server'ಆಗಿ ಕಾರ್ಯನಿರ್ವಹಿಸುತ್ತದೆ. ಮೂಲ ದತ್ತಾಂಶ ಸರ್ಕಾರದ ಡಾಟಾ ಸೆಂಟರ್ ನಲ್ಲಿ ಇರುತ್ತದೆ ಎಂದು ತಿಳಿಸಿದರು.

(3) ಮಾನ್ಯ ಸದಸ್ಯರಾದ ಡಾ: ಹರೀಶ್ ರವರು 1ನೇ ಸೆಮಿಸ್ಟರ್ ಅಂಕ ಪಟ್ಟಿಗಳು ಇನ್ನು ಮಹಾವಿದ್ಯಾಲಯಕ್ಕೆ ತಲುಪದೇ ಇರುವದನ್ನು ಪ್ರಸ್ತಾಪಿಸಿದರು.

ಕುಲಸಚಿವರು(ಮೌಲ್ಯಮಾಪನ) ರವರು ವಿವರಣೆ ನೀಡುತ್ತಾ ಅಂಕ ಪಟ್ಟಿಗಳನ್ನು ಲೆಡ್ಜರ್ ಜೊತಗೆ ಕಳಿಸಬೇಕಾಗಿದೆ, ಲೆಡ್ಜರನ್ನು ಮುದ್ರಣ ಮಾಡುವ ಯಂತ್ರವನ್ನು ಮಾರಾಟಗಾರರು ಇದುವರೆಗೆ ಸರಬರಾಜು ಮಾಡಿರುವುದಿಲ್ಲ

ಸರಬರಾಜು ಆದೇಶ ನೀಡಿ 70% ಮುಂಗಡ ಹಣ ನೀಡಿದರೂ ಇದುವರೆಗೆ ಎಂದು ತಿಳಿಸಿದರು.

ಸರಬರಾಜು ಮಾಡದೇ ಇರುವುದನ್ನು ಸಿಂಡಿಕೇಟ್ ಸಭೆ ಗಂಭೀರವಾಗಿ ಪರಿಗಣಿಸಿ ಸಂಬಂದಿಸಿದ ಮಾರಾಟಗಾರರಿಗೆ ಕೂಡಲೇ ಸರಬರಾಜು ಮಾಡಲು ನಿರ್ದೇಶನ ನೀಡಬೇಕೆಂದು, ತಪ್ಪಿದಲ್ಲಿ ದಂಡವಿಧಿಸುವ ಜೊತೆಗೆ ಸಂಸ್ಥೆಯ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದೆಂದು ಎಚ್ಚರಿಕೆ ನೀಡಲು ಸೂಚಿಸಲಾಯಿತು.

ಆಗತ್ಯವಾದ ಯಂತ್ರಗಳನ್ನು ಬಾಡಿಗೆ ಪಡೆದು ಲೆಡ್ಜರ್‌ಗಳನ್ನು ಮುದ್ರಿಸಲು ಹಾಗೂ ಈ ಕುರಿತು ಆಗುವ ವೆಚ್ಚವನ್ನು ಮಾರಾಟಗಾರರ ಬಿಲ್ಲಿನಲ್ಲಿ ಕಡಿತಗೊಳಿಸಲು ಸಭೆ ತೀರ್ಮಾನಿಸಿತು.

(4) ಆನ್ ಲೈನ್ ಪ್ರವೇಶ ವಿವರಗಳನ್ನು ದಾಖಲಿಸಲು ಇಂದು 23.08.2019 ಕೊನೆಯ ದಿನಾಂಕವಾಗಿದ್ದು, ಬಹಳಷ್ಟು ಮಾಹಾವಿದ್ಯಾಲಯಗಳಿಗೆ ಈ ವಿವರಗಳನ್ನು ದಾಖಲಿಸಲು ಸಾಧ್ಯವಾಗಿರುವುದಿಲ್ಲ. ಕಾರಣ ಕೊನೆಯ ದಿನಾಂಕವನ್ನು ಮುಂದೂಡಲು ಡಾ. ಹರೀಶ್ ರವರು ಕೋರಿದರು.

ಆನ್-ಲೈನ್ ಪ್ರವೇಶ ವಿವರಗಳನ್ನು ದಾಖಲಿಸಲು ಕೊನೆಯ ದಿನಾಂಕವನ್ನು 31.08.2019ಕ್ಕೆ ಮುಂದೂಡಲು ಸಭೆ ಒಪ್ಪಿಗೆ ನೀಡಿತು.

(5) ಎಂ.ಕಾಂ ಪ್ರವೇಶಕ್ಕಾಗಿ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಗೆ ಇಂದೇ ಕೊನೆಯ ದಿನಾಂಕವಾಗಿದ್ದು, ಸ್ವಾಯತ್ತ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳ ಪಟ್ಟಿ ಇನ್ನು ಪ್ರಕಟಿಸಿರುವುದಿಲ್ಲ ಎಂದು ಸದಸ್ಯರಾದ ಡಾ: ಅರವಿಂದ ಕುಲಪತಿಗಳ ಗಮನಕ್ಕೆ ತಂದರು. ಈ ಕುರಿತು ಪರಿಶೀಲಿಸಿ ಕ್ರಮ ಕೈಕೊಳ್ಳಲು ಕುಲಸಚಿವರು (ಮೌಲ್ಯಮಾಪನ) ರವರಿಗೆ ಕುಲಪತಿಗಳು ತಿಳಿಸಿದರು.

(6) ಮಾನ್ಯ ಸದಸ್ಯರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದಾಗ ಅವರಿಗೆ ಕುಳಿತು ಕೊಳ್ಳಲು ಒಂದು ಕೊಠಡಿ ನೀಡುವ ಕುರಿತು ನೀಡಿದ ಮನವಿಯ ಬಗ್ಗೆ ಸದಸ್ಯರಾದ ಶ್ರೀ ಸತೀಶ್ ರವರು ಮಾಹಿತಿ ಕೋರಿದರು.

ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ಕೈ ಕೊಳ್ಳಲಾಗುವುದು ಎಂದು ಕುಲಪತಿಗಳು ತಿಳಿಸಿದರು.

(7) ಸಿಂಡಿಕೇಟ್ ಸದಸ್ಯರು ಶಾಸನಬದ್ಧ ಅಧಿಕಾರಿಗಳಿಗೆ ಮಾಡುವ ದೂರವಾಣಿ ಕರೆಗಳನ್ನು ಅದ್ಯತೆಯ ಮೇಲೆ ಸ್ವೀಕರಿಸುವಂತೆ ಸೂಚನೆ ನೀಡಬೇಕೆಂದು ಸದಸ್ಯರಾದ ಶ್ರೀ ಸತೀಶ್ ರವರು ಮಾಡಿದ ಸಲಹೆಗೆ ಸಭೆ ಒಪ್ಪಿಗೆ ನೀಡಿತು.

(8) ಸದಸ್ಯರಾದ ಡಾ:ಅರವಿಂದ ರವರು ವಿಶ್ವವಿದ್ಯಾಲಯದ ಸಂಚಿತ ವೇತನದ ಸಿಬ್ಬಂದಿಗಳಿಗೆ ಶಾಸನ ಬದ್ಧವಾಗಿ ನೀಡಬೇಕಾದ ಭವಿಷ್ಯ ನಿಧಿ, ಇ.ಎಸ್.ಐ ಇತ್ಯಾದಿ ಸೌಲಭ್ಯಗಳ ಕುರಿತು ಕೈಕೊಂಡ ಕ್ರಮದ ಮಾಹಿತಿ ಕೋರಿದರು. ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ಕೈಕೊಂಡು ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ನೀಡುವುದಾಗಿ ಕುಲಪತಿಗಳು ತಿಳಿಸಿದರು.

(9) ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಮುನಿನಾರಾಯಣಪ್ಪ ರವರಿಗೆ ಅಗತ್ಯವಾದ ಕೊಠಡಿಯನ್ನು ನೀಡುವ ಕುರಿತು ಸದಸ್ಯರಾದ ಡಾ.ಎನ್. ನರಸಿಂಹಮೂರ್ತಿ ಯವರು ಪ್ರಸ್ತಾಪಿಸಿದರು. ಕುಲಪತಿಗಳು ಸಮಗ್ರವಾದ ವಿವರಣೆಯನ್ನು ಸಭೆಗೆ ನೀಡಿ, ವಾಣಿಜ್ಯ ವಿಭಾಗದ ಶಿಕ್ಷಕರ ಸಭೆ ಕರೆದು ಅವರೊಂದಿಗೆ ಚರ್ಚಿಸಿ ಸೂಕ್ತವಾದ ಕೊಠಡಿ ನೀಡುವ ಕುರಿತು ಸಮಾಧಾನಕರವಾದ ತೀರ್ಮಾನ ಕೈಕೊಳ್ಳಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು

29/8/19
ಕುಲಸಚಿವರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ